ಮಾಡುವುದಕ್ಕೆ ಆಗುತ್ತದೆ. ಇಂಟರ್‌ನೆಟ್‌ನಲ್ಲಿ ಯಾವ್ಯಾವ ಸ್ಕೂಲಿನಲ್ಲಿ ಎಷ್ಟೆಷ್ಟು ಫೀ ತೆಗೆದುಕೊಳ್ಳುತ್ತಾರೆಂದು ಯಾರು ಬೇಕಾದರೂ ನೋಡಬಹುದು. ಆದ್ದರಿಂದ ಈ ಬಗ್ಗೆ ಮಾನ್ಯ ಸುಬ್ಬಾರೆಡ್ಡಿಯವರು ಏನು ಒಂದು ಆತಂಕವನ್ನು ವ್ಯಕ್ತಮಾಡಿದ್ದಾರೆ ಇದಕ್ಕೆ ಸರ್ಕಾರ ಸ್ಪಂದಿಸುತ್ತದೆಂದು ನಾನು ಹೇಳಬಯಸುತ್ತೇನೆ.

ಈ. ಕಮಲಾಪುರ ಕ್ಷೇತ್ರದಲ್ಲಿ ನೀರಿನ ಸಮಸ್ಯೆಯ ಬಗ್ಗೆ

ಶ್ರೀ ರೇವುನಾಯ್ಕ ಬೆಳಮಗಿ (ಕಮಲಾಪುರ) : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ನನ್ನ ಮೀಸಲು ಕ್ಷೇತ್ರವಾದ ಕಮಲಾಪುರ ಬಹಳ ಹಿಂದುಳಿದ ಕ್ಷೇತ್ರ. ಇಲ್ಲಿ ನೀರಿನ ಸಮಸ್ಯೆ ಬಹಳ ಹಾಹಾಕಾರದಿಂದ ಕೂಡಿದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸಚಿವರಾಗಿರತಕ್ಕಂಥ ಮಾನ್ಯ ಫೋರ್ಪಡೆಯವರು ಇಲ್ಲಿಗೆ ಆಗಮಿಸಿದಾಗ ಸಂಬಂಧಪಟ್ಟ ಶಾಸಕರು ಹಾಗೂ ಅಧಿಕಾರಿಗಳ ಒಂದು ಸಭೆ ಕರೆದರು. ಈ ನೀರಿನ ಸಮಸ್ಯೆಯ ಬಗ್ಗೆ ಅವರಿಗೆ ಎಲ್ಲರೂ ಹೇಳಿದಾಗ, ಯಾವ ಯಾವ ಊರಿನಲ್ಲಿ, ತಾಂಡಗಳಲ್ಲಿ ನೀರಿನ ಸಮಸ್ಯೆ ಇದೆ ಇವುಗಳ ಬಗ್ಗೆ ಪ್ರಸ್ತಾವನೆ ಕೊಡಿ, ನಾನು ಹೆಚ್ಚುವರಿ (ಅಡಿಷನಲ್) ದುಡ್ಡು ಕೊಡುತ್ತೇನೆಂದು ತಿಳಿಸಿದ ಪ್ರಕಾರ ಅವರು ಆ ದುಡ್ಡನ್ನು ಕೊಟ್ಟಿರುವುದರಿಂದ ಸರ್ಕಾರಕ್ಕೆ ನನ್ನ ಧನ್ಯವಾದಗಳನ್ನು ತಿಳಿಸುತ್ತೇನೆ. ಇಲ್ಲಿ ಸಮಸ್ಯೆ ಏನಾಗಿದೆ ಎಂದರೆ, ಇದಕೊಂದು ಕಡಿವಾಣ ಹಾಕಿರುತ್ತಾರೆ. ಬಹಳ ತೊಂದರೆಯಿಂದಿರುವ ಊರುಗಳಿಗೆ ಹಣ ಕೊಟ್ಟು ಟೆಂಡರ್ ಕರೆದು ಕೆಲಸ ಪ್ರಾರಂಭಿಸಿ ಎಂದು ಹೇಳಿದ್ದಾರೆ. ಆದರೆ ಟೆಂಡರ್ ಕರೆಯುವುದಕ್ಕೆ ಹೆಚ್ಚು ದಿನಗಳು ಬೇಕಾಗುತ್ತವೆ. ಅಲ್ಲಿ ಜನ ಏನು ಮಾಡುತ್ತಾರೆಂದರೆ ಪ್ರತಿಯೊಂದು ಹಳ್ಳಿಗಳಿಗೆ ನೀರು ಒದಗಿಸಲು ಒಂದೆರಡು ಟ್ರಾಕ್ಟರ್ ಮತ್ತು ಟಿಪ್ಪರ್‌ಗಳನ್ನು ಇಟ್ಟಿದ್ದಾರೆ. ಇವುಗಳಿಂದ ನೀರು ಒದಗಿಸಿ ಎಂದು ಡಿ.ಸಿ.ಕಛೇರಿಯ ಮುಂದೆ, ತಹಸೀಲ್ದಾರ್‌ರವರ ಕಛೇರಿಯ ಮುಂದೆ, ಶಾಸಕರ ಮನೆಯ ಮುಂದೆ ಬಂದು ಜನಗಳ ಮುಷ್ಕರ ಮಾಡುತ್ತಾರೆ. ಈ ಟ್ರಾಕ್ಟರ್ ಮತ್ತು ಟಿಪ್ಪರ್‌ದಿಂದ ಬಹಳ ಹಣದ ದುರುಪಯೋಗವಾಗುತ್ತದೆ. ಆದ್ದರಿಂದ, ಇದರ ಬದಲು ಡಿಪಾರ್ಟ್‌ಮೆಂಟಿನಿಂದ ಈ ಕೆಲಸ ಪ್ರಾರಂಭಿಸಿದರೆ, ಕೆಲಸ ಪ್ರಾರಂಭವಾಗಿದೆ ಎಂದು ಜನಗಳು ಸುಮ್ಮನೆ ಹೋಗುತ್ತಾರೆ. ಸರ್ಕಾರಕ್ಕೆ ನಾನು ವಿನಂತಿ ಮಾಡುವುದೇನೆಂದರೆ ಯಾವ ಯಾವ ಊರುಗಳಲ್ಲಿ ನೀರಿನ ಹಾಹಾಕರ ಇದೆ ಅಲ್ಲಿ ಡಿಪಾರ್ಟ್‌ಮೆಂಟ್‌ನಿಂದ ಕೆಲಸ ಪ್ರಾರಂಭಿಸುವುದಕ್ಕೆ ಅವರಿಗೆ ಸೂಕ್ತವಾದ ನಿರ್ದೇಶನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ದಿವಾಕರ ಬಾಬು (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಮತ್ತು ಪ್ರತಿಯೊಂದು ಜಿಲ್ಲೆಯಲ್ಲೂ ನೀರು ಸರಬರಾಜನ್ನು ಪೈಪ್-ಲೈನ್ ಮುಖಾಂತರ ಮಾಡಬೇಕೆಂದು ಹಾಗೂ ಮಿನಿ ವಾಟರ್ ಸಪ್ಲೈನಿಂದ ನೀರು ಸರಬರಾಜು ಮಾಡಬೇಕೆಂದು ಒಂದು ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ಈ ವರ್ಷ ಸುಮಾರು ಸಾವಿರ ವಿಲೇಜ್‌ಗಳಿಗೆ ಪೈಪ್-ಲೈನ್ ಮೂಲಕ ನೀರನ್ನು ಸರಬರಾಜು ಮಾಡುತ್ತಿದ್ದೇವೆ ಮಾನ್ಯ ಸದಸ್ಯರು ಹೇಳಿದ ಹಾಗೆ ಕಾಮಗಾರಿ ಕೆಲಸಗಳಲ್ಲಿ ಡಿಪಾರ್ಟ್‌ಮೆಂಟ್‌ನಿಂದಲೇ ಆಗಬೇಕು, ಏಕೆಂದರೆ ತುರ್ತಾಗಿ ಆಗಬೇಕು ಎನ್ನುವ ಉದ್ದೇಶದಿಂದ 6 ರೀತಿ ಹೇಳಿದ್ದೇವೆ, ಅವರು ಹೇಳಿದ್ದಾರೆ, ನಾವು ಕೆಎಲ್‌ಎಸಿ ಅಥವಾ ಟೆಂಡರ್ ಎಂದು ಕಡಿವಾಣ ಹಾಕಿದ್ದೇವೆ. ಮಾನ್ಯ ಸದಸ್ಯರು ಹೇಳಿರುವುದನ್ನು ನಾವು ಕನ್‌ಸಿಡರ್ ಮಾಡುತ್ತೇವೆಂದು ತಮ್ಮ ಮೂಲಕ ನಾನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.